ತನ್ಮಯರಾಗುತ್ತಿದ್ದರು. "ನಾವಿಲ್ಲಿ ಅದೆಷ್ಟು ಖುಷಿಯಾಗಿದ್ದೇವೆ" ಎನ್ನುತ್ತ ತಮ್ಮ ತಮ್ಮೊಳಗೆ ಕಿರುಚಾಡುತ್ತಿದ್ದರು.

ಒಂದು ದಿನ ಆ ರಾಕ್ಷಸ ಮರಳಿ ಬಂದ. ಆತ ತನ್ನ ಗೆಳೆಯನನ್ನು ಭೆಟ್ಟಿಯಾಗಲು ಕಾರ್ನವಾಲ್ ಪ್ರಾಂತಕ್ಕೆ ಹೋಗಿದ್ದ, ಏಳು ವರ್ಷಗಳವರೆಗೆ ಆತ ತನ್ನ ಗೆಳೆಯನ ಜೊತೆಗಿದ್ದ. ಏಳು ವರ್ಷ ಕಳೆದ ನಂತರ ಆತ ತನ್ನ ಗೆಳೆಯನಿಗೆ ಹೇಳುವುದನ್ನೆಲ್ಲ ಹೇಳಿ, ತನ್ನ ಭವ್ಯ ಕೋಟೆಯ ಅರಮನೆಗೆ ವಾಪಸಾಗಲು ದೃಢ ನಿಶ್ಚಯ ಮಾಡಿದ. ಆತ ತನ್ನ ಅರಮನೆಗೆ ಬಂದಾಗ ಮಕ್ಕಳು ಹೂದೋಟದಲ್ಲಿ ಆಟವಾಡುತ್ತಿರುವುದನ್ನು ಕಂಡ.

"ನೀವಿಲ್ಲಿ ಏನು ಮಾಡುತ್ತಿರುವಿರಿ?" ಎಂದು ಆತ ಒರಟು ದನಿಯಲ್ಲಿ ಅಬ್ಬರಿಸಿದ. ಆತನ ಅಬ್ಬರಕ್ಕೆ ಮಕ್ಕಳು ಅಲ್ಲಿಂದ ಓಡಿ ಹೋದರು.

"ನನ್ನ ಹೂದೋಟವಿದು. ಕೇವಲ ನನ್ನ ಹೂದೋಟ! ಈ ಸಂಗತಿ ಎಲ್ಲರಿಗೆ ತಿಳಿದಿರಲಿ. ನನ್ನ ಹೊರತು, ಇಲ್ಲಿ ಆಟವಾಡಲು ಯಾರಿಗೂ ಅವಕಾಶ ನೀಡುವುದಿಲ್ಲ" ಎಂದು ಆ ರಾಕ್ಷಸ ಸೊಕ್ಕಿನಿಂದ ನುಡಿದ. ನಂತರ ಆ ಹೂದೋಟದ ಸುತ್ತ ಎತ್ತರವಾದ ಗೋಡೆ ನಿರ್ಮಿಸಿ, ಒಂದು ಸೂಚನಾ ಫಲಕವನ್ನು ತೂಗು ಹಾಕಿದ.

'ಈ ಹೂದೋಟವನ್ನು ಅತಿಕ್ರಮಿಸಿದವರಿಗೆ ಕಠಿಣ ಶಿಕ್ಷೆ ನೀಡಲಾಗುವುದು'

ಆತ ತುಂಬ ಸ್ವಾರ್ಥಿಯಾದ ರಾಕ್ಷಸನಾಗಿದ್ದ.

ಈಗ ಆ ಬಡಪಾಯಿ ಮಕ್ಕಳಿಗೆ ಆಟವಾಡಲು ಬೇರೆಲ್ಲೂ ಸ್ಥಳವಿರಲಿಲ್ಲ. ರಸ್ತೆಯ ಮೇಲೆ ಆಟವಾಡಲು ನೋಡಿದರು. ಆದರೆ ರಸ್ತೆ ಕಲ್ಲು ಕಲ್ಲಾಗಿತ್ತು ಹಾಗೂ ಎಲ್ಲೆಡೆ ದೂಳು ತುಂಬಿಕೊಂಡಿತ್ತು. ಮಕ್ಕಳಿಗೆ ಅಂತಹ ಜಾಗದಲ್ಲಿ ಆಟವಾಡಲು ಮನಸ್ಸಾಗಲಿಲ್ಲ. ತಮ್ಮ ಶಾಲೆಯ ಪಾಠಗಳು ಮುಗಿದ ನಂತರ, ಅಲ್ಲಿ ನಿರ್ಮಿಸಲಾಗಿದ್ದ ಎತ್ತರವಾದ ಗೋಡೆಯಗುಂಟ ಸುತ್ತಾಡುತ್ತ, ಅವರು ಒಳಗಿರುವ ಸುಂದರ ಹೂದೋಟದ ಬಗ್ಗೆ ಚರ್ಚಿಸುತ್ತಿದ್ದರು. "ಅಲ್ಲಿ ನಾವೆಷ್ಟು ಸಂತೋಷವಾಗಿದ್ದೆವು!" ಎಂದು ತಮ್ಮ ತಮ್ಮೊಳಗೆ ಅಂದುಕೊಳ್ಳುತ್ತಿದ್ದರು.

ಅನಂತರ ವಸಂತ ಋತು ಕಾಲಿಟ್ಟಿತು. ಇಡೀ ದೇಶ ಚಿಕ್ಕ ಚಿಕ್ಕ ಹೂಗಳಿಂದ, ಪುಟ್ಟ ಪುಟ್ಟ ಹಕ್ಕಿಗಳಿಂದ ತುಂಬಿ ಹೋಯಿತು. ಆ ಸ್ವಾರ್ಥಿ ರಾಕ್ಷಸನ ಹೂದೋಟದಲ್ಲಿ ಮಾತ್ರ ಇನ್ನೂ ಚಳಿಗಾಲವಿತ್ತು. ಅಲ್ಲಿ ಮಕ್ಕಳಿಲ್ಲದ್ದರಿಂದ ಹಕ್ಕಿಗಳು ಹಾಡುವ ಗೋಜಿಗೇ ಹೋಗಲಿಲ್ಲ. ಅಲ್ಲದೆ ಮರಗಳು ಹೂ ಅರಳಿಸುವುದನ್ನೇ ಮರೆತುಬಿಟ್ಟವು. ಒಂದು ಸಲ, ಒಂದು ಸುಂದರವಾದ ಹೂವು ಹುಲ್ಲಿನ ಹೊರಗೆ ಗೋಣುಚಾಚಿ ಅಲ್ಲಿದ್ದ ಸೂಚನಾ ಫಲಕವನ್ನು ನೋಡಿತು. ಆ ಮಕ್ಕಳ ಬಗ್ಗೆ ತುಂಬ ಕೆಡುಕೆನಿಸಿಕೊಂಡು, ಆ ಹೂವು ಮತ್ತೆ ಹುಲ್ಲಿನೊಳಗೆ ಮುಖ ಹುದುಗಿಸಿ ಮಲಗಿಕೊಂಡಿತು.

ಅಲ್ಲಿ ಖುಷಿಯಿಂದ ಇದ್ದವರೆಂದರೆ ಹಿಮ ಹಾಗೂ ಮಂಜುಗಡ್ಡೆ ಮಾತ್ರ. "ವಸಂತ ಋತು ಈ ಹೂದೋಟವನ್ನು ಮರೆತುಬಿಟ್ಟಿದೆ. ಇಡೀ ವರುಷ ನಾವಿಲ್ಲಿ ಹಾಯಾಗಿರಬಹುದು" ಎಂದು ಹಿಮ ಹಾಗೂ ಮಂಜುಗಡ್ಡೆ ಸಂತಸದಿಂದ ಕೇಕೆ ಹಾಕಿದವು. ಹಿಮವು ತನ್ನ ಬಿಳಿ ಚಾದರವನ್ನು ಹುಲ್ಲಿನ ಮೇಲೆಲ್ಲ ಹೊದಿಸಿತು ಹಾಗೂ ಮಂಜುಗಡ್ಡೆ ಅಲ್ಲಿದ್ದ ಮರಗಳಿಗೆ ಬೆಳ್ಳಿಬಣ್ಣ ಲೇಪಿಸಿತು. ನಂತರ ಅವು ತಮ್ಮ ಬಳಿಗೆ ಬರುವಂತೆ ಉತ್ತರದ ಗಾಳಿ(ಬಡಗಣ ಗಾಳಿ)ಗೆ ಆಹ್ವಾನ ನೀಡಿದವು. ಬಡಗಣ ಗಾಳಿ ಬಂದೇ ಬಿಟ್ಟಿತು. ಹಗುರವಾದ, ತೆಳು ತುಪ್ಪಳವನ್ನು ತನ್ನ ಮೈಗೆ ಸುತ್ತಿಕೊಂಡಿದ್ದ ಆ ಗಾಳಿ ಇಡೀ ದಿನ ಹೂದೋಟದ ಎಲ್ಲೆಡೆ ಭೋರೆಂದು ಬೀಸಿತು. ಅಲ್ಲದೆ ಅಲ್ಲಿದ್ದ ಹೊಗೆ ಕೊಳವೆಗಳನ್ನು ನೆಲಕ್ಕುರುಳಿಸಿತು. "ಎಂಥ ಮನೋಹರ ಸ್ಥಳವಿದು! ಇಲ್ಲಿಗೆ ಭೆಟ್ಟಿ ನೀಡುವಂತೆ ಆಣೆಕಲ್ಲು ಮಳೆಗೆ